ಸಂಯುಕ್ತ ಕರ್ನಾಟಕ

# ಯಕ್ಷಗಾನ ಕಂಸಾಳೆ ನೃತ್ಯದ ಕಂಪು

ಕನ್ನಡಿಗರಾಗಿ ಬಾಳುವುದು ನಿಜಕ್ಕೂ ಅದೃಷ್ಟವೇ. ಈ ನಾಡಿನಲ್ಲಿ ಇರುವ ಶ್ರೀಮಂತಿಕೆ, ಸಂಸ್ಕೃತಿ ಬೇರೆಯಡೆ ಸಿಗಲು ಸಾಧ್ಯವಿಲ್ಲ. ಇಲ್ಲಿನ ಪ್ರತಿಯೊಂದು ವಸ್ತುವಿನಲ್ಲೂ ಅದ್ದೂರಿಯಾದ ವೈಭವ ಎದ್ದು ಕಾಣುತ್ತದೆ.

ಆದರೆ, ಅದನ್ನು ನಮ್ಮ ಮಕ್ಕಳಿಗೆ ತಿಳಿಸಿಕೊಡುವುದು ಹೇಗೆ ಎಂದು ಎಲ್ಲರಿಗೂ ಕಾಡುತ್ತಿರುವ ಪ್ರಶ್ನೆಯಾಗಿದೆ. ಪಾಶ್ಚಾತ್ಯ ಸಂಸ್ಕೃತಿಗಳ ಒಡನಾಟವೇ ಹೆಚ್ಚಾಗುತ್ತಿರುವ ಇಂದಿನ ಮಕ್ಕಳಿಗೆ ಮಾತೃಭೂಮಿ, ಮಾತೃಭಾಷೆಯ ಬಗ್ಗೆ ಗೌರವ ಹಾಗೂ ಪ್ರೀತಿಯೇ ಕುಗ್ಗುತ್ತಿದೆ.

ಆ ಪ್ರೀತಿಯನ್ನು ಹೆಚ್ಚಿಸಲು ನಗರದ ಜೈನ್ ಹೆರಿಟೇಜ್ ಶಿಕ್ಷಣ ಸಂಸ್ಥೆಯು ವಿಭಿನ್ನವಾದ ಪ್ರಯತ್ನ ಮಾಡಿ ಎಲ್ಲರ ಗಮನ ಸೆಳೆಯುತ್ತಿದೆ. ಈ ಸಲದ ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ವಿಭಿನ್ನವಾದ ಕಾರ್ಯಕ್ರಮಗಳನ್ನು ಆಯೋಜಿಸಿ ಮಕ್ಕಳಿಗೆ ಸಂಪೂರ್ಣ ಮನರಂಜನೆಯನ್ನು ಪಡೆಯುವಂತೆ ಮಾಡಿದರು.






ಎರಡು ದಿನಗಳ ಅದ್ದೂರಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದ ಶಾಲಾ ಆಡಳಿತ ಮಂಡಳಿಯು, ಕನ್ನಡ ಸಂಸ್ಕೃತಿಯ ಪ್ರತೀಕವಾದ ಯಕ್ಷಗಾನ, ಕೋಲಾಟ, ಪೂಜಾ ಕುಣಿತ, ವೀರಗಾಸೆ, ಕಂಸಾಳೆ ನೃತ್ಯಗಳನ್ನು ಮಕ್ಕಳಿಗೆ ಕಲಿಸಿಕೊಟ್ಟು ಅವರಿಂದ ಪ್ರದರ್ಶನ ಮಾಡಿಸಿದರು.

ಇವುಗಳ ಜೊತೆಗೆ ಕನ್ನಡದ ನಾಟಕಗಳು, ಸಂಗೀತ, ನೃತ್ಯಗಳನ್ನು ಮಾಡಿ ಎಲ್ಲರ ಮನ ತಣಿಸಿದ ಶಾಲಾ ಮಕ್ಕಳು ಕನ್ನಡಾಂಬೆಯ ಮಕ್ಕಳಾಗಿ ಹುಟ್ಟಿರುವುದಕ್ಕೆ ತುಂಬಾ ಹೆಮ್ಮೆಯಾಗುತ್ತದೆ ಎಂದು ಎಲ್ಲರಿಗೂ ಖುಷಿಯಿಂದ ಹೇಳಿದರು. ಈ ರೀತಿಯ ಕಾರ್ಯಕ್ರಮಗಳನ್ನು ಶಾಲೆಗಳಲ್ಲಿ ಹಮ್ಮಿಕೊಂಡು ಮಕ್ಕಳಿಗೆ ಕನ್ನಡ ನಾಡಿನ ಬಗ್ಗೆ, ಇಲ್ಲಿನ ಶ್ರೀಮಂತಿಕೆಯ ಬಗ್ಗೆ ಹೇಳಿಕೊಟ್ಟರೆ ಕನ್ನಡ ನಾಡಿನ ಸಂಸ್ಕೃತಿಗೆ ಎಂದು ಧಕ್ಕೆ ಬರುವುದಿಲ್ಲ.